ಅಜೇಯ

ಆರೋಗ್ಯ

# ಪ್ರಜ್ಞಾಪರಾಧ; ನಾವು ತಿಳಿದೂ ಮಾಡುವ ತಪ್ಪುಗಳು






ಈ ಸಾಂಕ್ರಾಮಿಕ ಸೋಂಕಿನ ಇತಿಹಾಸ ಬಹಳ ದೊಡ್ಡದು. ಬಹುಶಃ ಐದು-ಆರು ಸಾವಿರ ವರ್ಷಗಳದ್ದಿರಬಹುದು. ಚರಕ ಮಹರ್ಷಿಯ ಬಗ್ಗೆ ನಮಗೆಲ್ಲರಿಗೂ ತಿಳಿದಿದೆ. ಅವರ ಗುರುಗಳಾದ ಅಗ್ನಿವೇಶರು ತಮ್ಮ ಗುರುಗಳಾದ ಮಹರ್ಷಿ ಪುನರ್ವಸು ಆತ್ರೇಯರಿಂದ ಕಲಿತ ಪಾಠಗಳಲ್ಲಿ ಅದೂ ಒಂದು. ಜನಪದೋದ್ಧ್ವಂಸ ವಿಜ್ಞಾನ. ಜನಪದ ಅಂದರೆ ಸಮುದಾಯ ಧ್ವಂಸವೆಂದರೆ ಘೋರವಾಗಿ ನಿರ್ನಾಮಗೊಳ್ಳುವುದು. ಯಾವುದೇ ಒಂದು ಸೋಂಕು ವ್ಯಕ್ತಿ ಮಾತ್ರನಿಗಲ್ಲದೆ ಇಡೀ ಸಮುದಾಯಕ್ಕೆ ಅಂಟುವುದೋ ಅದು ಎಲ್ಲರನ್ನು ಎಲ್ಲವನ್ನು ನಾಶಮಾಡಿಯೇ ನಿಲ್ಲುವುದು.

ಪಾಂಚಾಲ ದೇಶದ ರಾಜಧಾನಿಯಾದ ಕಾಂಪಿಲ್ಯ ನಗರದಲ್ಲಿ, ಮಹರ್ಷಿ ಪುನರ್ವಸು ಆತ್ರೇಯರು ತಮ್ಮ ಶಿಷ್ಯರಾದ ಅಗ್ನಿವೇಶ ಹಾಗು ಅನ್ಯ ಮುನಿವರ್ಯರಿಗೆ ಜನಪದೋದ್ಧ್ವಂಸ ಸಂಭವಿಸಲು ಕಾರಣಗಳೇನು, ಹರಡುವುದು ಹೇಗೆ, ಲಕ್ಷಣಗಳೇನು, ಪರಿಹಾರ ಸಾಧ್ಯವೇ ಎಂಬ ಎಲ್ಲಾ ಸಂಗತಿಗಳನ್ನು ಸವಿಸ್ತಾರವಾಗಿ ತಿಳಿಸಿದ್ದಾರೆ.

ಬೇರೆ ಬೇರೆ ಪ್ರಕೃತಿ, ಆಹಾರ ಪದ್ಧತಿ, ದೇಹ ಬಲ, ಮನೋಬಲ, ವಯಸ್ಸು ಇರುವವರಿಗೆ ಹೇಗೆ ಒಂದೇರೀತಿಯಾದ ಕಾಯಿಲೆ ಬಂದು ಸಾವುಂಟಾಗುವುದು ಎಂದು ಕೇಳಿದಾಗ ಆಚಾರ್ಯರು, ಎಲ್ಲರೂ ಬೇರೆ ಬೇರೆಯಾದರು, ಗಾಳಿ, ನೀರು, ಭೂಮಿ, ಕಾಲದ ವಿಕೋಪದಿಂದ ಏಕಕಾಲಕ್ಕೆ ಜರುಗಿ, ಇಡೀ ಸಮುದಾಯಕ್ಕೆ ಮಾರಕವಾಗುತ್ತದೆ.

ಅದೇ ರೀತಿಯಾಗಿ ದೂಷಿತ ಗಾಳಿ, ನೀರು, ಭೂಮಿ, ಕಾಲದ ಲಕ್ಷಣಗಳನ್ನು ಬಹಳ ಅಚ್ಚುಕಟ್ಟಾಗಿ ವಿವರಿಸಿ, ಕಾಲದ ವೈಪರೀತ್ಯ ಎಲ್ಲಕ್ಕಿಂತ ಘೋರ ಪರಿಣಾಮ ಬೀರಿ ಸಮಸ್ತ ಸಮುದಾಯಕ್ಕೆ ಕಂಟಕವನ್ನುಂಟು ಮಾಡುವುದು ಎಂದರು. ಆ ಕಂಟಕವನ್ನು ಪರಿಹರಿಸುವ ಶಾಸ್ತ್ರೋಕ್ತ ಚಿಕಿತ್ಸಾ ಕ್ರಮಗಳನ್ನು ಹೇಳಿದ ಮೇಲೆಯೂ ಸಮಾಧಾನಗೊಳ್ಳದ ಶಿಷ್ಯರು ಪುನಃ ಪ್ರಶ್ನೆ ಕೇಳಿದರು. ಏಕಕಾಲಕ್ಕೆ ಗಾಳಿ, ನೀರು, ದೇಶ, ಕಾಲ ಹೇಗೆ ವಿಕೋಪಗೊಳ್ಳಲು ಸಾಧ್ಯ? ಅದಕ್ಕೆ ಆಚಾರ್ಯರು ಎಲ್ಲವೂ ವಿಕೃತಗೊಳ್ಳಲು ಮೂಲ ಕಾರಣ ಅಧರ್ಮ, ಅದಕ್ಕೆ ಕಾರಣ ಪೂರ್ವ ಜನ್ಮದ ಅಸತ್ ಕರ್ಮ, ಅದಕ್ಕೆ ಕಾರಣ ಪ್ರಜ್ಞಾಪರಾಧ, ನಾವು ತಿಳಿದೂ ಮಾಡುವ ತಪ್ಪುಗಳು.

ಇಲ್ಲಿ ಧರ್ಮವೆಂದರೆ ಜಾತಿ ಖಂಡಿತವಲ್ಲ, ಅದು ಸನ್ಮಾರ್ಗ, ಸನ್ನಡತೆ. ಯಾವಾಗ ಮನುಷ್ಯ ತನ್ನ ಸ್ವಹಿತ್ಕಾಗಿ ಗಾಳಿ, ನೀರು, ಭೂಮಿಯ ಬಳಕೆಯ ಬದಲು ಶೋಷಣೆ ಮಾಡುತ್ತಾನೊ ತನ್ನ ಪತನಕ್ಕೆ ಮುನ್ನುಡಿ ಹಾಕಿಕೊಂಡಂತೆ. ಲೋಭ, ಈರ್ಷೆ, ದ್ವೇಷ, ಮತ್ಸರ ಹಾಗೂ ಸ್ವಾರ್ಥಕ್ಕಾಗಿ ಮಾಡುವ ಕೆಲಸಗಳೆಲ್ಲವೂ ಅಧರ್ಮವೇ. ನಾವು ಅದು ತಪ್ಪು ಅಂತ ತಿಳಿದೂ ಮಾಡಿದರೆ ಅದು ಪ್ರಜ್ಞಾಪರಾಧ. ಕೃತಿಯಲ್ಲಿ ಅಪಚಾರ, ಯೋಚನೆಯಲ್ಲಿ ಅಪಚಾರ ಎರಡೂ ಅಪರಾಧವೇ, ಅಧರ್ಮವೇ. ಇನ್ನು ಶಸ್ತ್ರಗಳಿಂದ (ಅಣ್ವಸ್ತ್ರ/ಸ್ಥೂಲಾಸ್ತ್ರ) ಆಗುವ ಜನಪದೋದ್ಧ್ವಂಸವೂ ಅಧರ್ಮವೇ. ಲೋಭ, ಕ್ರೋಧ, ಮೋಹ ಹಾಗೂ ಅಭಿಮಾನ ಹೆಚ್ಚಾದಾಗ ಒಬ್ಬರ ಮೇಲೆ ಒಬ್ಬರು ಯುದ್ಧ ಹೂಡುವುದು, ಒಬ್ಬರನ್ನು ಒಬ್ಬರು ಸರ್ವನಾಶ ಮಾಡುವುದು, ಯಾವ ಧರ್ಮ!

ಇದಕ್ಕು ಕೊರೋನಾಕ್ಕೂ ಏನು ಸಂಬಂಧ ಎಂದು ಯೋಚಿಸುವವರಿಗೆ ಸ್ವಲ್ಪ ವಿಸ್ತಾರವಾಗಿ ವಿವರಿಸೋಣ. ಕೊರೋನಾ ವೈರಾಣು ಪ್ರಾಣಿಗಳ ದೇಹದ ಮೇಲೆ ಸಹಜವಾಗಿಯೆ ವಾಸಿಸುತ್ತದೆ. ಅವಕ್ಕೆ ಆ ವೈರಾಣು ಯಾವ ತೊಂದರೆಯು ಮಾಡುವುದಿಲ್ಲ, ಪ್ರಾಣಿಗಳು ಆ ವೈರಾಣುವನ್ನು ಮನುಷ್ಯರಿಗೆ ಸುಮ್ಮನೆ ಸೋಂಕಿಸುವುದಿಲ್ಲ, ಆ ಪ್ರಾಣಿಗಳನ್ನು ಅದರ ಮೂಲ ವಾಸಸ್ಥಾನದಿಂದ ಕದಲಿಸಿ, ಅಥವಾ ಅದರ ಹಸಿ ಮಾಂಸದ ಸಂಪರ್ಕಕ್ಕೆ ಬಂದರೆ ಮಾತ್ರ ಕೊರೋನ ಮನುಷ್ಯರಿಗೆ ತಗಲುವುದು. ಕೊರೋನಾ ವೈರಾಣುವು ತನ್ನ ಮೂಲ ಆವಾಸಸ್ಥಾನದಲ್ಲಿ ಯಾವ ಸೋಂಕನ್ನು ಹರಡುವುದಿಲ್ಲ, ಆದರೆ, ಅದರ ನೆಲೆ ಬದಲಾದರೆ ಅದು ಕೆರಳಿ ಅದು ಇರುವ ಹೊಸ ಸ್ಥಳದಲ್ಲಿ ನಾನಾ ರೀತಿಯ ತೊಂದರೆಗಳನ್ನು ಕೊಟ್ಟು ಆ ಹೊಸ ಅತಿಥೇಯ(ಮನುಷ್ಯ)ನ್ನ ಕೊಲ್ಲುವ ಮಟ್ಟಿಗೆ ಹೋಗುತ್ತದೆ. ಬುದ್ಧಿಜೀವಿಯಾದ ಮನುಷ್ಯನು ಪ್ರಕೃತಿಯಲ್ಲಿರುವ ಗಾಳಿ, ನೀರು, ಭೂಮಿ, ಕಾಲ, ಪ್ರಾಣಿ, ಮನುಷ್ಯರೊಂದಿಗೆ ಸಹಬಾಳ್ವೆ ಮಾಡಿದರೆ ಈಗ ಸಂಭವಿಸುತ್ತಿರುವ ಎಷ್ಟೋ ತೊಂದರೆಗಳು ಉದ್ಭವಿಸುತ್ತಿರಲಿಲ್ಲ, ಯಾವುದೋ ಮೂಲೆಯಲ್ಲಿ ಬಾವುಲಿಗಳಲ್ಲಿ ಮನೆ ಮಾಡಿಕೊಂಡು ಮಜವಾಗಿದ್ದ ಕೊರೋನಾ ಕೋವಿಡ್-19 ಆಗಿ ಇಡೀ ಜಗತ್ತಿನ ಮನೆ ಮಾತಾಗಿರುತ್ತಿಲ್ಲ, ಅಮಾನುಷವಾಗಿ ಪ್ರಕೃತಿ ನಾಶಮಾಡಿ, ಅನ್ಯ ಜೀವಿಗಳ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳುತ್ತಿರುವ ನಾವು ಅಧರ್ಮಿಗಳು ಅಲ್ಲವೆ. ಗಾಳಿ, ನೀರು, ನೆಲ ಬಳಸದೇ ಬದುಕಲು ಕಷ್ಟ ಆದರೆ ನಮ್ಮ ಅವಶ್ಯಕತೆ ಮೀರಿ ಲೋಭದಿಂದ ಅವುಗಳನ್ನು ಮುಂದಿನ ಪೀಳಿಗೆಯವರಿಗೆ ಯೋಗ್ಯವಾಗಿ ಬಳಸಲು ಉಳಿಸದೇ ಇರುವುದು ಧರ್ಮವೇ? ಪ್ರಕೃತಿ ಉತ್ತರ ನೀಡುತ್ತದೆ. ಸುಂಟರಗಾಳಿ, ಸುನಾಮಿ, ಭೂಕಂಪ, ಕಾಡ್ಗಿಚ್ಚು, ಸಾಂಕ್ರಾಮಿಕ ರೋಗಗಳು ಇವು ಎಚ್ಚರಿಕೆಯ ಗಂಟೆ, ಅರಿತು ಸುಧಾರಿಸಿಕೊಂಡರೆ ಸೈ ಇಲ್ಲವಾದಲ್ಲಿ, ಜನಪದೋದ್ಧ್ವಂಸ ಆಗುವುದರಲ್ಲಿ ಯಾವ ಅನುಮಾನವೂ ಇಲ್ಲ.

ಕೊರೋನಾದ ಬಗ್ಗೆ ಮತ್ತೊಂದು ವದಂತಿ ಬಲವಾಗಿ ಕೇಳಬರುತ್ತಿದೆ. ಇದು ಮಾನವ ನಿರ್ಮಿತ. ಹಾಗಾದರೂ ಅದು ಅಧರ್ಮವೇ ಹೌದು. ಮನುಷ್ಯ ತನ್ನ ಬುದ್ಧಿ ಶಕ್ತಿಯಿಂದ ಎಲ್ಲವನ್ನು ತನ್ನ ವಶಮಾಡಿಕೊಂಡು ಇಡೀ ಪ್ರಪಂಚವನ್ನು ಕೈಬೆರಳಲ್ಲಿ ಆಡಿಸಬಹುದು ಎಂದು ತಿಳಿದ ತಕ್ಷಣದಿಂದ ಅಲ್ಲಿ ಅರಾಜಕತೆ ರಾರಾಜಿಸುತ್ತದೆ.

ಕೊರೋನ ಮಾನವ ನಿರ್ಮಿತವೊ, ಪ್ರಕೃತಿಯ ಶಿಕ್ಷೆಯೋ ಅದರ ಮೂಲ ಅಧರ್ಮದ ಫಲ. ಜೀವನ ಶೈಲಿಯಲ್ಲಿ ಶಿಸ್ತು ಹೋಯ್ತು, ಆಹಾರ ಕ್ರಮ ತಪ್ಪಿತು, ನಿದ್ದೆಯಲ್ಲೂ ನೆಮ್ಮದಿ ಇಲ್ಲ, ಕೆಲಸ ಜೀವನ ನಿರ್ವಹಣೆಗೆ- ಶ್ರದ್ಧೆಯಿಲ್ಲ....

ಹೀಗಿರುವಲ್ಲಿ ಧರ್ಮವೆಲ್ಲಿ?? ಅಧರ್ಮವೇ ಎಲ್ಲಾ!

ಧರ್ಮದಿಂದ ನಡೆದು, ಬಂದಿರುವ ಸಂಕಷ್ಟದಿಂದ ಪಾರಾಗಿ ಮುಂದೆ ಇಂತಹ ಸಂದರ್ಭ ಬರದಿರಲು ಆಯುರ್ವೇದ ಹೇಳಿರುವ ಹಲವು ಸೂತ್ರಗಳನ್ನು ಪಾಲಿಸುವುದರಿಂದ ಸಾಮ್ಯತೆ ಪುನಃ ಸ್ಥಾಪಿಸಲು ಸಾಧ್ಯ.

ಆಯುಃಕಾಮಯಮಾನೇನ ಧರ್ಮಾರ್ಥ ಸುಖ ಸಾಧನಂ।
ಆಯುರ್ವೇದೋಪದೇಶೇಷು ವಿಧೇಯಃಪರಮಾದರಂ॥
ವಾಗ್ಭಟಾಚಾರ್ಯ

ಧರ್ಮ-ಅರ್ಥ-ಸುಖಗಳ ಸಂಪಾದನೆಗೆ ದೀರ್ಘಾಯುಷ್ಯವು ಅಗತ್ಯ. ಬಹುದಿನ ಬಾಳಲಿಚ್ಛಿಸುವವರು, ಆಯುರ್ವೇದ ಸಂಹಿತೆಗಳಲ್ಲಿ ಅನ್ವಲಾಗಿರುವ ಉಪದೇಶಗಳನ್ನು ಬಹುಶ್ರದ್ಧೆ ಪ್ರಯತ್ನಗಳಿಂದ ಕೇಳಿ ತಿಳಿದುಕೊಳ್ಳಬೇಕು ಮತ್ತೆ ಅದರಂತೆ ನಡೆದುಕೊಳ್ಳಬೇಕು.